## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ:463/2023

**ಸಾಕ್ಷಿಯನ್ನು ದಿಃ 24.07.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಸಯ್ಯದ್ ಯೂನೀಸ್ | ಸಿಡಬ್ಲ್ಯೂ:3 | ಪಿಡಬ್ಲ್ಯೂ:2 |
| ತಂದೆಯ ಹೆಸರು | ಸಯ್ಯದ್ ಯಾಕೂಬ್ | | |
| ವಯಸ್ಸು | 42 ವರ್ಷ | | |
| ಉದ್ಯೋಗ | ಬೀರು ಅಂಗಡಿ | | |
| ವಾಸಸ್ಥಳ | ಶಬ್ಬಿರ್ ನಗರ, ಹುಣಸೂರು. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಿಪಿ. 2 ಮತ್ತು 3 ರ ಸ್ಥಳ ಮಹಜರ್ ಹಾಗೂ ನಕ್ಷೆಯಲ್ಲಿ ಸಾಕ್ಷಿ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಗಳನ್ನು ನಿಪಿ. 2(ಬಿ) ಮತ್ತು 3(ಬಿ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಈಗ್ಗೆ 2 ವರ್ಷಗಳ ಹಿಂದೆ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಮಾಡಿರುತ್ತೇನೆ. ಆಗ ಸಮಯ 2. ರಿಂದ 4.00 ಗಂಟೆ ಆಗಿರಬಹುದು. ಸಾಕ್ಷಿಗೆ ಎರಡು ಪೋಟೊಗಳನ್ನು ತೋರಿಸಲಾಗಿ ಅದರಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ. 9 ಮತ್ತು 10 ಎಂದು ಗುರುತಿಸಲಾಯಿತು. ಸದರಿ ಪೋಟೊಗಳನ್ನು ಯಾವುದೋ ಹಳ್ಳಿಗೆ ಕರೆದುಕೊಂಡು ಹೋಗಿದ್ದು ಅಪಘಾತ ಆಗಿದ ಸ್ಥಳ ಎಂದು ತೋರಿಸಿ ತೆಗೆದಿದ್ದರು.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿಸಲಾಯಿತು)**

**<u>ಪಾಟೀಸವಾಲು ಸಸಅ ರವರಿಂದಃ–</u>**

ನಾಗಾಪುರ ಹಾಡಿ, 4 ನೇ ಘಟಕ ಬಳಿ ವೀರನಹೂಸಹಳ್ಳಿ ಬಳಿ ಅಪಘಾತ ಆಗಿರುವ ವಿಚಾವಾಗಿ ಮಹಜರ್ ಮಾಡಲು ಕರೆದುಕೊಂಡು ಹೋದಾಗ ನಾನು ನಿಪಿ. 2 ಮತ್ತು 3 ಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸ್ಥಳವನ್ನು ಮುಬಾರಕ್ ಪಾಷಾ ಚಾಸಾ1 ರವರು ತೋರಿಸಿದ್ದು, ಆಗ ನನ್ನ ಜೊತೆ ಚಾಸಾ 4 ರವರು ಇದ್ದರು ಎಂದರೆ ಸರಿಯಲ್ಲ. ಸ್ಥಳದಲ್ಲಿ 4.30 ರಿಂದ 5.30 ಮಹಜರ್ ಮಾಡಿದ್ದರು ಎಂದರೆ ಸರಿಯಲ್ಲ. ಮಹಜರ್ ಮಾಡಿದ ದಿಃ 15.01.2023 ಆಗಿತ್ತು ಎಂದರೆ ದಿನಾಂಕ ಸಹಿ ಮಾಡಿದ ದಿನಾಂಕ ಇರಬಹುದು ಎನ್ನುತ್ತಾರೆ. ಅದೇ ರೀತಿ ನಿಪಿ. 3 ರಂತೆ ನಕ್ಷೆಯನ್ನು ಸ್ಥಳದಲ್ಲೆ ಮಾಡಿದ್ದರೂ ಎಂದರೆ ಸರಿಯಲ್ಲ. ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎ.ಎನ್. ವಕೀಲರಿಂದಃ</u>**

ನಿಪಿ. 2 ಮತ್ತು 3 ರ ಮಹಜರ್ ಮತ್ತು ನಕ್ಷೆಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.